**ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ,**
**ಬಸವನ ಬಾಗೇವಾಡಿ.**

ಸಿಸಿ ನಂಃ 450/2015
CW1/PW2

**<u>ಸಾಕ್ಷಿಯನ್ನು ಇಂದು ದಿನಾಂಕಃ 25.03.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ವಕೀಲರಿಂದ.</u>**

**1.** ನಾನು 4 ರಿಂದ 15 ನೇ ಆರೋಪಿತರನ್ನು ನೋಡಿದರೆ ಗುರುತಿಸಿರುತ್ತೇನೆ. ಈ ದಿನ ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 10,12 ಮತ್ತು 13 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 4 ರಿಂದ 9,14 ಮತ್ತು 15 ನೇ ಆರೋಪಿತರು ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಸದರಿ ಆರೋಪಿತರ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸಿರುತ್ತಾರೆ. 11 ನೇ ಆರೋಪಿಯು ಮೃತ ಪಟ್ಟಿರುತ್ತಾರೆ.

**ಪಾಟಿ ಸವಾಲು: ಆರೋಪಿತರ ಪರ ಶ್ರೀ.ಆರ್.ಬಿ.ಜಿ.ಎನ್ ವಕೀಲರಿಂದಃ-**

1. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ಮನೆಯಿಂದ ಆರೋಪಿತರ ಮನೆಯು ಸುಮಾರು 8 ಮೀಟರ್ ಅಂತರದಲ್ಲಿ ಇರುತ್ತದೆ. ನಮ್ಮ ಮನೆಯ ತೋಲೆಯ ಬಾಗಿಲು ಉತ್ತರ ದಿಕ್ಕಿಗೆ ಇರುತ್ತದೆ. ಆರೋಪಿತರ ಮನೆಯ ತೋಲ ಬಾಗಿಲು ಉತ್ತರ ದಿಕ್ಕಿಗೆ ಇರುತ್ತದೆ. ನಮ್ಮ ಮನೆಯ ಪೂರ್ವಕ್ಕೆ ಇರುವ ಖಾಲಿ ಜಾಗದ ಪೂರ್ವಕ್ಕೆ ಆರೋಪಿತರ ಮನೆ ಇರುತ್ತದೆ.

2. ನಾನು ಆರೋಪಿತರ ವಿರುದ್ದ ಸಲ್ಲಿಸಿರುವ ಅಸಲು ದಾವೆಯು ವಜಾ

ಆಗಿರುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ನಾನು ನೋಡಿಲ್ಲ ಎಂದು ಹೇಳುತ್ತಾರೆ. ಆರೋಪಿತರಿಗೂ ಮತ್ತು ನಮಗೂ ಮೊದಲಿನಿಂದಲೂ ವೈಮಸ್ಸು ಇರುತ್ತದೆ ಎಂದರೆ ಸಾಕ್ಷಿಯು ಜಾಗದ ಸಲುವಾಗಿ ನಮಗೂ ಮತ್ತು ಆರೋಪಿತರಿಗೂ ವೈಮನಸ್ಸು ಇರುತ್ತದೆ ಎಂದು ಹೇಳುತ್ತಾರೆ.

3. 1 ನೇ ಆರೋಪಿಯು ನನಗೆ ಅವಾಚ್ಯವಾಗಿ ಬೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಉಳಿದ ಆರೋಪಿತರನ್ನು ಕರೆಯಿಸಿ ಎಲ್ಲರೂ ಕೂಡಿ ನನಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ನಮ್ಮ ಮನೆಯ ಹತ್ತಿರ ದಿಃ 16.12.2014 ರಂದು ಸಂಜೆ 06.30 ಗಂಟೆಗೆ ಬಂದಿರುತ್ತಾನೆ. ಅದೇ ರೀತಿಯಾಗಿ ಉಳಿದ ಆರೋಪಿತರು ಕೂಡಾ ತಕ್ಷಣವೇ ಬಂದಿರುತ್ತಾರೆ. ಈ ಕುರಿತು ನಾನು ನಿಪಿ-2 ರ ದೂರಿನಲ್ಲಿ ಬರೆಸಿರುತ್ತೇನೆ. 1 ಮತ್ತು 2 ನೇ ಆರೋಪಿತರು ಅಲ್ಲಿಯೇ ಬಿದ್ದಿದ್ದ ಕಲ್ಲನ್ನು ತೆಗದುಕೊಂಡು ನನಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರು ಗಲಾಟೆಯನ್ನು ಬಿಡಿಸಲು ಬಂದಾಗ 7 ಮತ್ತು 8 ನೇ ಆರೋಪಿತರು ಬಂದು ಚಾಸಾ-4 ರವರಿಗೆ ಕೈಯಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಚಾಸಾ-6 ರವರ ಮನೆಯು ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ಬರುತ್ತದೆ. ಅದೇ ರೀತಿಯಾಗಿ ಚಾಸಾ-7 ರವರ ಮನೆಯು ನಮ್ಮ ಮನೆಯ ಪೂರ್ವ ದಿಕ್ಕಿಗೆ ಬರುತ್ತದೆ. ಚಾಸಾ-6 ರವರು ಮೊದಲಿನಿಂದಲೂ ಜಮೀನದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-6 ರವರು ನನಗೆ ಬಹಳ ಆತ್ಮೀಯರಾಗಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ಮಧ್ಯ ಯಾವುದೇ ಗಲಾಟೆಯು ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು

ಯಾವುದೇ ತಪ್ಪು ಮಾಡದೇ ಇದ್ದರೂ ಕೂಡಾ ನಾನು ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಮುಂದೆ ಸಾಕಷ್ಟು ಕಲ್ಲುಗಳು ಬಿದ್ದಿರುತ್ತವೆ ಎಂದರೆ ಸರಿ.

ಮರುವಿಚಾರಣೆ-ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

1 ನೇ **ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು, ಬಸವನ ಬಾಗೇವಾಡಿ.**